For more job news visit : www.kpscvaani.com

M/S BKR Swamy Security Agency

310 Pavilion Road, PJ Extension Davanagera 577002

ಸಂಖ್ಯೆ _____

ದಿನಾಂಕ 16-06-2020

ಪತ್ರಿಕಾ ಪ್ರಕಟಣೆ

ವಿಷಯ :- ರಾಯಚೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನಕ್ಕೆ ಎಡಿಪಿಸಿ, ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ತಾಲೂಕ ಎಂಐಎಸ್ ಸಂಯೋಜಕರ ಸೇವೆ ಒದಗಿಸಲು ನೇಮಕಾತಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ:- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಯಚೂರು ಇವರ ಪತ್ರ ಸಂಖ್ಯೆ: ಜಿಪಂರಾ/ಉಖಾಯೋ/ಹೂ.ಮೂ/2020-21 ದಿನಾಂಕ:10-06-2020.

ರಾಯಚೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯತಿ ಹಾಗೂ ಇತರೆ ಅನುಷ್ಠಾನ ಇಲಾಖೆಗಳ ಮೂಲಕ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನಕ್ಕೆ ಎಡಿಪಿಸಿ, ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ತಾಲೂಕ ಎಂಐಎಸ್ ಸಂಯೋಜಕರ ಸೇವೆ ಒದಗಿಸಲು ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) ವಿದ್ಯಾರ್ಹತೆ ವಯೋಮಿತಿ ಮತ್ತು ಮಾಸಿಕ ಸಂಭಾವನೆ –

ಕ್ರ.ಸಂ	ಹುದ್ದೆಯ ಹೆಸರು	ಕನಿಷ್ಠ ವಿದ್ಯಾರ್ಹತೆ	ಆದ್ಯತೆ	ಅನುಭವ	ವಯೋಮಿತಿ	ಮಾಸಿಕ ಸಂಭಾವನೆ
1	ADPC	MBA Master in Social welfare 3 ವರ್ಷಗಳ ಕಡ್ಡಾಯ ಅನುಭವ ಇರತಕ್ಕದ್ದು.	-	3 ವರ್ಷಗಳು	21-40	ರೂ 35000/-
1)	ತಾಂತ್ರಿಕ ಸಂಯೋಜಕರು	ME/MTech Civil ಕಾರ್ಯಕ್ಷೇತ್ರದಲ್ಲಿ ಕನಿಷ್ಠ 3 ವರ್ಷಗಳ ಕಡ್ಡಾಯ ಅನುಭವ ಇರತಕ್ಕದ್ದು.	-	3 ವರ್ಷಗಳು	21-40	ರೂ 27000/- (ಪ್ರಯಾಣ ಭತ್ಯೆ ಪ್ರತಿ ಕಿ.ಮಿ.ಗೆ 5 ರೂನಂತೆ ಗರಿಷ್ಠ ಮಾಸಿಕ 1500/-)
2)	ಸಿವಿಲ್ ತಾಂತ್ರಿಕ ಸಹಾಯಕ	Diploma in Civil /BE Civil ಕಾರ್ಯಕ್ಷೇತ್ರದಲ್ಲಿ ಕನಿಷ್ಠ 2ವರ್ಷಗಳ ಕಡ್ಡಾಯ ಅನುಭವ ಇರತಕ್ಕದ್ದು.	ME/MTech Civil ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು	2 ವರ್ಷಗಳು	21-40	ರೂ 22000/- (ಪ್ರಯಾಣ ಭತ್ಯೆ ಪ್ರತಿ ಕಿ.ಮಿ.ಗೆ 5 ರೂನಂತೆ ಗರಿಷ್ಠ ಮಾಸಿಕ 1500/-)
3)	ಅರಣ್ಯ ತಾಂತ್ರಿಕ ಸಹಾಯಕ	ಅರಣ್ಯ ವಿಜ್ಞಾನದಲ್ಲಿ ಪದವಿ BSc (Forestry)	MSc (Forestry) ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು	-	21-40	ರೂ 22000/- (ಪ್ರಯಾಣ ಭತ್ಯೆ ಪ್ರತಿ ಕಿ.ಮಿ.ಗೆ 5 ರೂನಂತೆ ಗರಿಷ್ಠ ಮಾಸಿಕ 1500/-)
4)	ತಾಂತ್ರಿಕ ಸಹಾಯಕರು (ಕೃಷಿ ತೋಟಗಾರಿಕೆ)	BSc (Agri) BSc (Horticulture)	MSc(Agri) MSc(Horticulture) ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು	-	21-40	ರೂ 22000/- (ಪ್ರಯಾಣ ಭತ್ಯೆ ಪ್ರತಿ ಕಿ.ಮಿ.ಗೆ 5 ರೂನಂತೆ ಗರಿಷ್ಠ ಮಾಸಿಕ 1500/-)
5)	ತಾಲೂಕ ಎಂ.ಐ.ಎಸ್ ಸಂಯೋಜಕರು	B.E.(Computer Science) B.E.(I.T.) B.SC (Computer Science) BCA MIS/IMIS ವಿಷಯದಲ್ಲಿ 3 ವರ್ಷಗಳ ಕಡ್ಡಾಯ ಅನುಭವ ಇರತಕ್ಕದ್ದು	MTECH/MCA/M.Sc (Computer Science ,IT) ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು	3 ವರ್ಷಗಳು	21-40	ರೂ 18000/-

ಪು.ತಿ.ನೋ

For more job news visit : www.kpscvaani.com

2) ಆಯ್ಕೆ ವಿಧಾನ –

A) ಮೇಲ್ಕಂಡಂತೆ ಶೈಕ್ಷಣೀಕ ವಿದ್ಯಾರ್ಹತೆ ಮತ್ತು ಕೆಲಸದ ಅನುಭವ ಹೊಂದಿರುವ ಅಭ್ಯರ್ಥಿಗಳು ಎಲ್ಲಾ ಸೆಮಿಸ್ಟರ್ ಗಳು /ವರ್ಷಗಳಲ್ಲಿ ಪಡೆದಿರುವ ಅಂಕಗಳನ್ನು ಒಟ್ಟಾರೆ ಸರಾಸರಿ ಲೆಕ್ಕ ಹಾಕಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 1:3 ಮೆರಿಟ್ ಆಧಾರದಲ್ಲಿ ಮೂಲ ಪಟ್ಟಿ ಸಿದ್ಧಪಡಿಸಲಾಗುವುದು. ಕ್ರ.ಸಂ1ರ ಕೋಷ್ಠಕದ 5ನೇ ಕಲಂನಲ್ಲಿ ವಿವರಿಸಿರುವಂತೆ ಸ್ನಾತಕೋತರ ಪದವಿ ಪಡೆದಿರುವ ಅಭ್ಯರ್ಥಿಗಳಿಗೆ ಮೊದಲನೇಯ ಆಧ್ಯತೆ ನೀಡಲಾಗುವುದು.

B) 1:3 ಮೆರಿಟ್ ಆಧಾರದಲ್ಲಿ ತಯಾರಿಸಿದ ಪಟ್ಟಿಯಲ್ಲಿನ ಅರ್ಹ ಅಭ್ಯರ್ಥಿಗಳಿಗೆ ಸಂಬಂಧಿಸಿದ ವಿದ್ಯಾರ್ಹತೆ ಹಾಗೂ ಕಾರ್ಯಕ್ಷೇತ್ರಗಳ ಬಗ್ಗೆ, ಪರೀಕ್ಷೆ ಜರುಗಿಸಲಾಗುವುದು. ಕನಿಷ್ಠ ಶೇಕಡ 40 ರಷ್ಟು ಅಂಕ ಪಡೆದ ಅಭ್ಯರ್ಥಿಗಳು ಮಾತ್ರ ಮೆರಿಟ್ ಪಟ್ಟಿ ಸಿದ್ಧ ಪಡಿಸಲು ಅರ್ಹತೆ ಪಡೆಯುತ್ತಾರೆ. ಶೈಕ್ಷಣಿಕ ವಿದ್ಯಾರ್ಹತೆಯ ಅಂಕಗಳನ್ನು ಮಾತ್ರ ಪರಿಗಣಿಸಿ ಮೆರಿಟ್ ಪಟ್ಟಿ ಸಿದ್ಧಪಡಿಸಲಾಗುವುದು. ಮೆರಿಟ್ ಪಟ್ಟಿ ಸಿದ್ಧಪಡಿಸುವಾಗ ಸ್ನಾತಕೋತ್ತರ ಪದವಿದಾರರಿಗೆ ಮೊದಲನೆಯ ಆಧ್ಯತೆ ನೀಡಲಾಗುವುದು. ಸಂಸ್ಥೆಯಿಂದ ಜರುಗಿಸುವ ಪರೀಕ್ಷೆಯಲ್ಲಿ ಪಡೆದ ಅಂಕಗಳು ಹಾಗೂ ಕಾರ್ಯಕ್ಷೇತ್ರದ ಅನುಭವಕ್ಕೆ ಯಾವುದೇ Weightage /ಅಂಕಗಳನ್ನು ನೀಡಲಾಗುವುದಿಲ್ಲ.

C) ಅಂತಿಮಗೊಳಿಸಿದ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಜಿಲ್ಲಾ ಪಂಚಾಯತಿಯ ಬೇಡಿಕೆ ಅನುಗುಣವಾಗಿ ಅಭ್ಯರ್ಥಿಗಳನ್ನು ನಿಯೋಜಿಸಲಾಗುವುದು.

ಅರ್ಜಿ ಸಲ್ಲಿಸುವ ವಿಧಾನ –

Online ಅರ್ಜಿಗಳನ್ನು http://zpraichur.kar.nic.in/ Website ಮೂಲಕ ಸಲ್ಲಿಸತಕ್ಕದ್ದು. ಇತರೆ ಯಾವುದೇ ವಿಧಾನಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

A) **Online ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ 23-06-2020**

B) **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 05-07-2020**

C) **Online ಅರ್ಜಿಯಲ್ಲಿರುವ ಎಲ್ಲಾ ಮಾಹಿತಿಗಳನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು, ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

D) **Online ಅರ್ಜಿ ನಮೂನೆ, ವಿದ್ಯಾರ್ಹತೆ ಹಾಗೂ ಇತರೆ ಎಲ್ಲಾ ಪೂರ್ಣ ಪ್ರಮಾಣದ ವಿವರಗಳನ್ನು ಮೇಲೆ ಕಾಣಿಸಿದ ವೆಬ್ ಸೈಟ್ ನಲ್ಲಿ ಪಡೆಯಬಹುದಾಗಿದೆ.**

3) ಅರ್ಜಿಯೊಂದಿಗೆ ಲಗತ್ತಿಸಬೇಕಾದ (Upload in PDF ಮಾಡಬೇಕಾದ ದಾಖಲೆಗಳು)

a) ಸಹಿಯೊಂದಿಗೆ ದೃಡೀಕರಿಸಿದ ಇತ್ತೀಚಿನ ಭಾವಚಿತ್ರ

b) ಜನ್ಮ ದಿನಾಂಕ ದೃಡಪಡಿಸುವ SSLC ಅಂಕಪಟ್ಟಿ ಪ್ರತಿ

c) ಶೈಕ್ಷಣಿಕ ವಿದ್ಯಾರ್ಹತೆಯ ಎಲ್ಲಾ ಸೆಮಿಷ್ಟರ್‌ಗಳ/ವರ್ಷಗಳ ಅಂಕಪಟ್ಟಿಗಳ ಪ್ರತಿಗಳು

d) ಸ್ನಾತಕೋತರ ಪದವಿ ಅಂಕಪಟ್ಟಿಗಳ ಪ್ರತಿಗಳು (ಆದ್ಯತೆಗೆ ಪರಿಗಣಿಸಲು)

e) ಕಾರ್ಯಕ್ಷೇತ್ರದಲ್ಲಿ ಅನುಭವ ಪ್ರಮಾಣ ಪತ್ರಗಳು

4) ಅಂತಿಮ ಅಭ್ಯರ್ಥಿಗಳ ಪಟ್ಟಿ ತಯಾರಿಸಿದ ನಂತರ ದಾಖಲಾತಿ ಪರಿಶೀಲನೆಗೆ ಜಿಲ್ಲಾ ಪಂಚಾಯತಿಯಿಂದ ಅಭ್ಯರ್ಥಿಗಳನ್ನು ಕರೆದು ನಿಗದಿತ ದಿನಾಂಕದಂದು ದಾಖಲಾತಿ ಪರಿಶೀಲನೆ ಕೈಗೊಳ್ಳಲಾಗುವುದು. ದಾಖಲಾತಿ ಪರಿಶೀಲನಾ ದಿನಾಂಕವನ್ನು ಅಭ್ಯರ್ಥಿಗಳಿಗೆ ಇ-ಮೇಲ್ ಮತ್ತು ವೆಬ್ ಸೈಟ್ ನೋಟೀಸ್ ಮೂಲಕ ತಿಳಿಸಲಾಗುವುದು. ದಾಖಲಾತಿ ಪರಿಶೀಲನಾ ದಿನದಂದು ಅಭ್ಯರ್ಥಿಗಳು ಹಾಜರಾಗದಿದ್ದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಪು.ತಿ.ನೋ

For more job news visit : www.kpscvaani.com

5) ಅಭ್ಯರ್ಥಿಗಳು ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು ಮತ್ತು ಕನ್ನಡ ಮತ್ತು ಇಂಗ್ಲೀಷ್ ಭಾಷೆ ಚೆನ್ನಾಗಿ ತಿಳಿದಿರಬೇಕು.

6) ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ವಿಧವಾದ ಭತ್ಯೆ ನೀಡಲಾಗುವುದಿಲ್ಲ.

7) ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಯೋಜಿಸಿದ ಸ್ಥಳದಲ್ಲಿ ಕಾರ್ಯನಿರ್ವಹಿಸತಕ್ಕದ್ದು.

8) ಹೊರಗುತ್ತಿಗೆ ಸೇವಾ ಅವಧಿಯು 11 ತಿಂಗಳಾಗಿದ್ದು, ಇವರ ಕಾರ್ಯಕ್ಷಮತೆ ಪರಿಶೀಲಿಸಿ ಮುಂದುವರೆಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

9) ನೇಮಕಗೊಂಡ ಹೊರಗುತ್ತಿಗೆ ಸಿಬ್ಬಂದಿಯು ವಾರ್ಷಿಕ 12 ದಿನಗಳ ಸಾಂಧರ್ಭಿಕ ರಜೆ ಪಡೆಯಬಹುದು.

10) ಮಹಿಳೆಯರು Maternity Benefit Act 1961ರಡಿಯಲ್ಲಿ ಹೆರಿಗೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.

11) ಆಯ್ಕೆಯಾದ ಅಭ್ಯರ್ಥಿಗಳು ತಾವು ನಿರ್ವಹಿಸುವ ಸ್ಥಳದಲ್ಲಿ ಅವ್ಯವಹಾರ ಅಥವಾ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಸಾಭೀತಾದಲ್ಲಿ ತಕ್ಷಣವೇ ಸೇವೆ ರದ್ದುಪಡಿಸಲಾಗುವುದು ಹಾಗೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

12) ಒಂದು ವೇಳೆ ಮೆರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು. ಮೆರಿಟ್ ಆಧಾರದ ಪ್ರತೀಕ್ಷಾ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಭರ್ತಿಯಾಗದ ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವುದು.

ಮುಖ್ಯಸ್ಥರು,
M/S BKR Swamy Security Agency
310 Pavilion Road, PJ Extension
Davanagera 577002
BKR SERVICES GROUP
BKR Swamy Security Agencies
RAICHUR-584 101